ದಿ ಭಾರತ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ನಂ.30, 15ನೇ ಅಡ್ಡ ರಸ್ತೆ, 3ನೇ ವಿಭಾಗ, ಜಯನಗರ, ಬೆಂಗಳೂರು–560 011

2018–19ನೇ ಸಾಲಿನ ವಾರ್ಷಿಕ ವರದಿ

ಮಾನ್ಯ ಸದಸ್ಯರೇ,

ದಿನಾಂಕ 21.08.1974 ರಂದು ಸಹಕಾರ ರತ್ನ ಸನ್ಮಾನ್ಯ ಶ್ರೀ ಬಿ ಎಲ್ ಲಕ್ಕೇಗೌಡರಿಂದ ಸ್ಥಾಪಿತವಾಗಿ ದಿನಾಂಕ 03.01.1975ರಲ್ಲಿ ವ್ಯವಹಾರಗಳನ್ನು ನಡೆಸಲು ಭಾರತೀಯ ರಿಸರ್ವ್ ಬ್ಯಾಂಕ್ ನಿಂದ ಅನುಮತಿ ಪಡೆದು ದಿನಾಂಕ 27.03.1975ರಲ್ಲಿ ತನ್ನ ವ್ಯವಹಾರಗಳನ್ನು ಪ್ರಾರಂಭಿಸಿ ಬ್ಯಾಂಕು 44 ವರ್ಷಗಳ ಸೇವೆಯನ್ನು ಪೂರೈಸಿ, 45ನೇ ವರ್ಷಕ್ಕೆ ಕಾಲಿಟ್ಟಿದೆ. ಈ ಸಂದರ್ಭದಲ್ಲಿ ಬ್ಯಾಂಕಿನ ಹುಟ್ಟು ಮತ್ತು ಬೆಳವಣಿಗೆಗೆ ಕಾರಣರಾದ ಸಂಸ್ಥಾಪಕರಾದ ಸಹಕಾರ ರತ್ನ ಸನ್ಮಾನ್ಯ ಶ್ರೀ ಬಿ.ಎಲ್. ಲಕ್ಕೇಗೌಡರವರು ಭಾರತ್ ಸಮೂಹ ಸಂಸ್ಥೆಗಳನ್ನು ಸ್ಥಾಪಿಸಿ, ಇವುಗಳನ್ನು ಹೆಮ್ಮರವಾಗಿ ಬೆಳಸಿ, ಸಹಕಾರ, ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಅವಿಸ್ಮರಣೀಯ ಸೇವೆಯನ್ನು ಸಲ್ಲಿಸಿರುತ್ತಾರೆ. ಸನ್ಮಾನ್ಯ ಶ್ರೀ ಬಿ.ಎಲ್.ಲಕ್ಕೇಗೌಡರ ಮಾರ್ಗದರ್ಶನವನ್ನು ಸ್ಮರಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಹಣಕಾಸು, ಆರ್ಥಿಕ ಸಾಧನೆ ಮತ್ತು ವ್ಯವಹಾರಗಳ ಮುಖ್ಯಾಂಶಗಳ ವಿವರಗಳನ್ನು ವಾರ್ಷಿಕ ವರದಿಯ ಕೊನೆಯ ಪುಟದಲ್ಲಿ ನಮೂದಿಸಿದೆ. ಬ್ಯಾಂಕು ಎಲ್ಲಾ ರೀತಿಯಲ್ಲೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು ವರದಿ ಸಾಲಿನಲ್ಲಿ ಠೇವಣಿ, ಸಾಲಗಳು, ನಿವ್ವಳ ಲಾಭ ಮತ್ತು ವಸೂಲಾತಿ ಕ್ಷೇತ್ರಗಳಲ್ಲಿ ಸರ್ವತೋಮುಖ ಬೆಳವಣಿಗೆ ಹೊಂದಿದೆಯೆಂದು ಹಾಗೂ ಬ್ಯಾಂಕಿನ ಒಟ್ಟು ವ್ಯವಹಾರ ರೂ.74618 ಲಕ್ಷಗಳಾಗಿದ್ದು ಕಳೆದ ವರ್ಷಕ್ಕೆ ಹೋಲಿಸಿದರೆ ರೂ.6483 ಲಕ್ಷ ಹೆಚ್ಚಳವಾಗಿ ಶೇ. 9.51 ರಷ್ಟು ವೃದ್ಧಿಯಾಗಿದೆಯೆಂದು ತಿಳಿಸಲು ಹರ್ಷಿಸುತ್ತೇವೆ. ವರದಿ ಸಾಲಿನಲ್ಲಿ ಠೇವಣಿಗಳು ರೂ. 563 ಲಕ್ಷ ಹೆಚ್ಚಳವಾಗಿ ರೂ. 43659 ಲಕ್ಷಗಳಿಗೆ ತಲುಪಿದೆ. ಪೂರ್ತಿ ಠೇವಣಿ ಸಂಗ್ರಹಣೆ ಒಳ್ಳೆಯ ಸಾಲಗಳಲ್ಲಿ ನೀಡಿಕೆಯಾಗಿ ಸದ್ಬಳಕೆಯಾಗಿದ್ದು, ಸಾಲಗಳು ರೂ. 5920 ಲಕ್ಷ ಹೆಚ್ಚಳವಾಗಿ ರೂ. 30959 ಲಕ್ಷಗಳಿಗೆ ತಲುಪಿರುವುದನ್ನು ತಿಳಿಸಲು ಹರ್ಷಿಸುತ್ತೇವೆ. ಕೆಲವು ಕಠಿಣ ಕ್ರಮಗಳ ಪರಿಣಾಮ ವಸೂಲಾತಿಯು ಪ್ರತಿ ವರ್ಷ ಉತ್ತಮಗೊಳ್ಳುತ್ತಿದ್ದು. ದಿನಾಂಕ 31.03.2019ರ ಅಂತ್ಯಕ್ಕೆ ಒಟ್ಟು ಎನ್.ಪಿ.ಎ. ಶೇ.4.94 ಇದ್ದು, ನಿವ್ವಳ ಎನ್.ಪಿ.ಎ. ಶೇ.1.94 ರಷ್ಟಾಗಿರುತ್ತದೆ. ಬ್ಯಾಂಕು ಎಲ್ಲಾ ವಿಭಾಗಗಳಲ್ಲೂ ಸರ್ವತೋಮುಖ ಅಭಿವೃದ್ಧಿ ಹೊಂದುತ್ತಿದೆ ಎಂದು ತಿಳಿಸಲು ಹರ್ಷಿಸುತ್ತೇವೆ. 2018-19ನೇ ಸಾಲಿನಲ್ಲಿ ಬ್ಯಾಂಕು ಒಟ್ಟು ಲಾಭ ರೂ.639 ಲಕ್ಷ ಗಳಿಸಿದ್ದು. ಆದಾಯ ತೆರಿಗೆ ಪೂರ್ವ ನಿವ್ವಳ ಲಾಭ ರೂ. 528 ಲಕ್ಷಗಳು ಮತ್ತು ಆದಾಯ ತೆರಿಗೆ ಜಾತ ರೂ. 197 ಲಕ್ಷಗಳನ್ನು ಕಳೆದು ರೂ. 331 ಲಕ್ಷಗಳ ನಿವ್ವಳ ಲಾಭಗಳಿಸಿ ಸದಸ್ಯರಿಗೆ ಶೇ.14 ರಷ್ಟು ಡಿವಿಡೆಂಡ್ ನೀಡಲು ಆಡಳಿತ ಮಂಡಳಿ ವಾರ್ಷಿಕ ಮಹಾಸಭೆಗೆ ಶಿಫಾರಸ್ಸು ಮಾಡಿದೆ.

ಸ್ಮರಣೆ :– 2018–19ನೇ ವರದಿ ಸಾಲಿನಲ್ಲಿ ಈ ಕೆಳಕಂಡ 117 ಸದಸ್ಯರುಗಳು ದೈವಾಧೀನರಾಗಿರುತ್ತಾರೆ. ಮೃತ್ತರ ಆತ್ಮಕ್ಕೆ ಶಾಂತಿ ಕೋರಿ ಅವರ ಕುಟುಂಬಕ್ಕೆ ಸಂತಾಪ ಸೂಚಿಸುವುದು ನಮ್ಮ ಅಧ್ಯ ಕರ್ತವ್ಯವಾಗಿದೆ.

ಮರಣ ಹೊಂದಿರುವ ಸದಸ್ಯರ ವಿವರ ದಿನಾಂಕ 01.04.2018 ರಿಂದ 31.03.2019ರವರೆವಿಗೆ.

ಕ್ರ.ಸಂ.	ಸದಸ್ಯರ ಹೆಸರು	L.F. No.	ಕ್ರ.ಸಂ.	ಸದಸ್ಯರ ಹೆಸರು	L.F. No.	ಕ್ರ.ಸಂ.	ಸದಸ್ಯರ ಹೆಸರು	L.F. No.
	ಶ್ರೀಮತಿ/ಶ್ರೀ							
1	ವೀರಭದ್ರಶೆಟ್ಟಿ	31723/A	36	ರಾಜೇಶ್. ಆರ್	49910/R	71	ನಂಜುಂಡಸ್ವಾಮಿ .ಹೆಚ್.	36226/R
2	ವಿಶ್ವನಾಥ	7221/R	37	ದಾಸಪ್ಪ. ಸಿ	46984/R	72	ಲಿಂಗಯ್ಯ. ಎಂ	1836/R
3	ಪುಟ್ಟಸ್ವಾಮಿ	31880/R	38	ನಾಗರಾಜು. ಎಂ	29514/R	73	ವೆಂಕಟೇಶ್. ಹೆಚ್	46658/R
4	ಲಕ್ಷ್ಮೀನರಸಿಂಹಯ್ಯ ಟಿ.ಎನ್.	3615/R	39	ಗೋಪಾಲಕೃಷ್ಣ. ಎಸ್	19719/R	74	ಜಗದೀಶ್. ಬಿ	23362/R
5	ಬಸವೇಗೌಡ ಸಿ	50190/R	40	ಕೃಷ್ಣಪ್ಪ ಆರ್.ಎಂ.	10074/R	75	ನಂಜುಂಡಪ್ಪ ಹೆಚ್.ಬಿ.	4023/R
6	ನಾಗಮ್ಮ ಎಂ	29382/A	41	ಸುರೇಶ. ಹೆಚ್	14965/R	76	ಪ್ರಭುದರ್. ಎ	11853/R
7	ಮಹೇಶ್ ಜಿ	22368/R	42	ಅಶೋಕ್ ಕುಮಾರ್ ಎನ್.ಎಸ್.	10371/R	77	ಗೋವಿಂದರಾಜು	27188/A
8	ಳೈ್ಯ ಆರ್.ಕೆ.	3229/R	43	ಶ್ರೀನಿವಾಸಲು	11339/R	78	ಅನ್ನಪೂರ್ಣಮ್ಮ. ಬಿ	18908/R
9	ರಾಧ ಡಿ.ವಿ.	45286/R	44	ಶೇಷಾದ್ರಪ್ಪ ಹೆಚ್.ವಿ.	13911/R	79	ಚಂದ್ರಶೇಖರಯ್ಯ. ಎಲ್	29011/A
10	ನಿಂಗಮ್ಮ	9323/R	45	ಸಿಕಂದರ್ ಹಯತ್ ಖಾನ್	29500/A	80	ಪ್ರಭಾಕರ್. ಎಲ್	14122/R
11	ಗೋವಿಂದರಾಜು.ಕೆ	8603/R	46	ಕೃಷ್ಣಮೂರ್ತಿ. ಆರ್	7573/R	81	ಚಿಕ್ಕರಾಜು. ಬಿ	23307/R
12	ಲಕ್ಷ್ಮಣ ಬಿ	18513/R	47	ಗೌರಮ್ಮ ಹೆಚ್.ಕೆ.	10756/R	82	ನಂದಕುಮಾರ್ ಟಿ.ವಿ.	30533/R
13	ನಾರಾಯಣ ಬಿ.ಕೆ.	382/R	48	ಜಹರಾಬಿ	41921/A	83	ಗಾಯತ್ರಿ ಧನಂಜಯ	42742/R
14	ರಾಮೇಗೌಡ ಡಿ.ಎಂ.	21734/R	49	ವಿ. ಶಾಮಣ್ಣ	3971/R	84	ಗಾಯತ್ರಿ ಟಿ.ವಿ.	14025/R
15	ನಾರಾಯಣಸ್ವಾಮಿ. ವಿ	10486/R	50	ಸದಾಶಿವಯ್ಯ ಕೆ.ಸಿ.	41571/R	85	ವರದರಾಜು ಎಂ.ಆರ್.	12875/R
16	ವೆಂಕಟೇಶ್ ಕೆ.ಟಿ.	10121/R	51	ಜಯಲಕ್ಷ್ಮಮ್ಮ	50341/R	86	ರಾಮಯ್ಯ	6445/R
17	ರುಕ್ಮಿಣಿ ಕೆ.ಆರ್.	48395/R	52	ಭಾಸ್ಕರ್	170/R	87	ಕೌಸಲ್ಯ.ಕೆ	35112/R
18	ಚನ್ನಬಸಪ್ಪ. ಟಿ	10565R	53	ದೇವಕುಮಾರಿ. ಟಿ	50368/R	88	ಶ್ರೀನಿವಾಸ ಚೆಟ್ಟಿ. ಟಿ	39151/A
19	ಲಕ್ಷ್ಮಿಕಾಂತ. ಬಿ	31700/A	54	ಚಂದ್ರಮ್ಮ	43514/R	89	ಶಾರದಮ್ಮ	40010/R
20	ಮುನಿರಾಜಯ್ಯ ಎಂ.ವಿ.	42545/R	55	ಸಿದ್ದಲಿಂಗಮ್ಮ	47835/R	90	ಶಿವಪ್ಪ ಬಿ.ಎಂ.	43079/R
21	ಚಂದ್ರಕುಮಾರ ಎಸ್.ಎನ್.	24237/R	56	ಸಂಗಪ್ಪ	6952/R	91	ಸುಧಾ ಆರ್ ಸ್ವೈ	38313/A
22	ಅಶ್ವಥಪ್ಪ. ಎನ್	77732/R	57	ನಾಗರಾಜು. ಬಿ	12515/R	92	ಪುಟ್ಟಸ್ವಾಮಿಗೌಡ ಸಿ.ಎಸ್.	35388/R
23	ರಘುರಾಮ್ ಎಂ.ವಿ.	17766/R	58	ಸೋಮಶೇಖರ ರಾವ್. ಡಿ	5325/R	93	ಮನೋಹರ ಅನಂತ್ ಎಸ್.ಎಲ್	39078/A
24	ಅನಸೂಯಮ್ಮ ಜಿ.ಎನ್.	51847/R	59	ಬಂಗಾರಪ್ಪ. ಜೆ	13322/R	94	ರುದ್ರಪ್ಪ ವಿ.ಸಿ.	9236/R
25	ಪುಟ್ಟಸ್ವಾಮಿ. ಎಂ	40567/R	60	ವೇದಾವತಿ	19268/R	95	ಶಂಕರಯ್ಯ ಬಿ.ಎಂ.	12141/R
26	ರಾಮನಾಥಶಾಸ್ತ್ರಿ .ಎಸ್.	95663/A	61	ನಾಗರಾಜ. ಬಿ	38096/R	96	ಕುಮಾರಸ್ವಾಮಿ ಟಿ.ಹೆಚ್.	7505/R
27	ನಾಗಭೂಷಣ. ಎಂ	14835/R	62	ವೆಂಕಟಸ್ವಾಮಿ ಆರ್.ವಿ.	23551/R	97	ತಿಮ್ಮಯ್ಯ.	7234/R
28	ನರಸಿಂಹಯ್ಯ ಬಿ.ಕೆ.	16906/R	63	ಶ್ರೀನಿವಾಸಮೂರ್ತಿ. ಎಂ	17129/R	98	ಚಂದ್ರೇಗೌಡ ಟಿ.ಆರ್.	13342/R
29	ಕೆಂಚಯ್ಯ	28348/R	64	ಶಾರದಮ್ಮ	51514/R	99	ನರಸಿಂಫ್	28122/R
30	ಪಾರ್ವತಮ್ಮ	7662/R	65	ಬಸವರಾಜ	24831/R	100	ತಿಮ್ಮಪ್ಪ. ಬಿ	22245/R
31	ರಾಧಮ್ಮ	13850/R	66	ಮುನಿಕೃಷ್ಣ	336/R	101	ಸಚ್ಚಿದಾನಂದ ಮೂರ್ತಿ ಬಿ.ಎಸ್.	11421/R
32	ಪದ್ಮಾವತಿ	49950/R	67	ಗಣೆ ಎನ್.ಎ.	27481/A	102	ಲಕ್ಷ್ಮಮ್ಮ	14412/R
33	ಜಾನ್ ಸೋಲಮನ್.	8158/R	68	ಪಂಕಜ	40/R	103	ಅಪ್ಪೇಗೌಡ ಎಂ.ಎಸ್.	7908/R
34	ಗುರುಮೂರ್ತಿ ಎಸ್.ಆರ್.	13760/R	69	ಚಂದ್ರ. ಎಂ	10807/R	104	ಅಮರಾವತಿ	13474/R
35	ಮನೋಹರ್ ಎಂ.ಎನ್.	8086/R	70	ಕೃಷ್ಣಪ್ಪ. ವಿ	48406/R	105	ಹನುಮಂತರಾಯಪ್ಪ.	18873/R

106	ಪಾರ್ವತಿ	30155/A	110	ಜಯರಾಜ್ ವೈ.ಆರ್.	35129/R	114	ಪರಂತಾನ್. ಆರ್	36137/A
107	ಸುಬ್ಬಮ್ಮ ವೆಂಕಟಸ್ವಾಮಿ	180/R	111	ಲಲಿತ. ಎಸ್	11628/R	115	ಗೋವಿಂದಸ್ವಾಮಿ. ಸಿ	35331/A
108	ಸುಶೀಲ ಭಟ್	8504/R	112	ವೆಂಕಟೇಶ್ ಗೌಡ	23743/R	116	ನಾರಾಯಣಸ್ವಾಮಿ. ಆರ್	11148/R
109	ಗೋವಿಂದರಾಜ ಎಂ.ಎ.	9749/R	113	ಶಿವಕುಮಾರ್ ಕೆ.ಎಸ್.	8468/R	117	ಪ್ರಕಾಶ್. ಎನ್	12209/R

ದಿನಾಂಕ : 23-09-2018ರಂದು ನಡೆದ ಸರ್ವಸದಸ್ಯರ ಸಭೆಯ ನಡಾವಳಿಗಳ ಮೇಲೆ ಕ್ರಮ ಕೈಗೊಂಡ ಬಗ್ಗೆ ವರದಿ

1. ಸಂಶಾಯಾತ್ಮಕ ಸಾಲಗಳಲ್ಲಿ ವಸೂಲಾಗದೆ ಇದ್ದ 80 ಸಾಲಗಳಿದ್ದು, ಇದರಲ್ಲಿ 10 ಖಾತೆಗಳು ಮುಕ್ತಾಯವಾಗಿದ್ದು ರೂ. 5.45 ಲಕ್ಷ ವಸೂಲಾಗಿರುತ್ತದೆ. ಭಾಗಶಃ ವಸೂಲಾಗಿರುವ ಖಾತೆಗಳು 20 ಇದ್ದು ರೂ 4.55 ಲಕ್ಷಗಳ ಮೊತ್ತ ವಸೂಲಾಗಿರುತ್ತದೆ. ಇವುಗಳ ವಸೂಲಾತಿಗೆ ತೀವ್ರ ಕ್ರಮಕೈಗೊಳ್ಳಲಾಗಿದೆ.
2. ಠೇವಣಿಗಳು ಮತ್ತು ಸಾಲಗಳ ಮೇಲಿನ ಬಡ್ಡಿ ದರಗಳನ್ನು ಪರಿಷ್ಕರಿಸಲಾಗಿದೆ.
3. ಹೆಚ್ಚುವರಿ ನಿಧಿಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿ ಈ ಸಾಲಿನಾಂತ್ಯಕ್ಕೆ ಸಾಲಗಳು ರೂ.30959 ಲಕ್ಷಗಳಿಗೆ ತಲು , ಸಾಲ ಮತ್ತು ಠೇವಣಿ ಅನುಪಾತ ಶೇ.71 ರಷ್ಟಾಗಿರುತ್ತದೆ.
4. ATM Rupay Card (ಡಿಬಿಟ್ ಕಾರ್ಡ್) ಅನ್ನು ಎಲ್ಲಾ ಗ್ರಾಹಕರಿಗೆ ವಿತರಿಸಲಾಗುತ್ತದೆ. ಸದಸ್ಯರು/ಗ್ರಾಹಕರು ATM Rupay Card ಅನ್ನು ಪಡೆದುಕೊಳ್ಳಲು ಕೋರಲಾಗಿದೆ.

ಪ್ರಗತಿ :–

ಬ್ಯಾಂಕಿನ ಹಣಕಾಸು ಸಾಧನೆ ಮತ್ತು ವ್ಯವಹಾರಗಳ ಪ್ರಗತಿಯ ಮುಖ್ಯಾಂಶಗಳು :–

ಬ್ಯಾಂಕಿನ ತುಲನಾತ್ಮಕ ಹಣಕಾಸಿನ ವಿವರ ಕೆಳಕಂಡಂತಿದೆ. ಈ ಅಂಕಿ ಅಂಶಗಳಿಂದ ಕಳೆದ ಐದು ವರ್ಷಗಳಿಂದ ಆದ ಬ್ಯಾಂಕಿನ ಸರ್ವಾಂಗೀಣ ಬೆಳವಣಿಗೆಯನ್ನು ಕಾಣಬಹುದಾಗಿದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ವಿವರ	31.03.2015	31.03.2016	31.03.2017	31.03.2018	31.03.2019
1	ಸದಸ್ಯರುಗಳ ಸಂಖ್ಯೆ	41644	41775	41808	41869	42373
2	ಷೇರು ಬಂಡವಾಳ	450.32	532.05	642.28	859.31	1117.52
3	ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು	2655.51	2727.08	2653.35	2770.94	2817.06
4	ಠೇವಣಿಗಳು	28591.21	33123.73	39411.24	43095.98	43659.49
5	ಹೂಡಿಕೆಗಳು	11396.10	14277.11	18822.95	19742.27	14910.61
6	ಸಾಲ ಮತ್ತು ಮುಂಗಡಗಳು	19213.72	20892.04	20956.73	25039.14	30959.00
7	ದುಡಿಯುವ ಬಂಡವಾಳ	32230.00	37017.93	43306.20	47462.92	48452.80
8	ನಿವ್ವಳ ಲಾಭ	117.90	142.43	187.39	171.72	330.82
9	Capital to Risk Assets Ratio (CRAR)	ಶೇ.10.19	ಶೇ.11.07	ಶೇ.10.50	ಶೇ.9.74	ಶೇ.9.88
10	ಒಟ್ಟು ಎನ್. .ಎ. (Gross NPA)	ಶೇ.4.44	ಶೇ.4.29	ಶೇ.6.44	ಶೇ.4.09	ಶೇ.4.94
11	ನಿವ್ವಳ ಎನ್. .ಎ. (Net NPA)	ಶೇ.0	ಶೇ.0	ಶೇ.1.86	ಶೇ.0.22	ಶೇ.1.94

ಬ್ಯಾಂಕಿನ ಕಾರ್ಯವ್ಯಾ :–

ಬ್ಯಾಂಕಿನ ಕಾರ್ಯವ್ಯಾ_ಯು ಬೆಂಗಳೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಹಾಸನ ಮತ್ತು ಮೈಸೂರು ಈ 5 ಜಿಲ್ಲೆಗಳಿಗೆ ಸೀಮಿತವಾಗಿದೆ.

ಬ್ಯಾಂಕಿನ ಆರ್ಥಿಕ ಫಲಿತಾಂಶದ ವಿವರ :

1. ಸದಸ್ಯತ್ವ ಮತ್ತು ಷೇರು ಬಂಡವಾಳ

1) ಸದಸ್ಯತ್ವ :

ದಿನಾಂಕ 31.03.2019 ಕ್ಕೆ ಬ್ಯಾಂಕಿನಲ್ಲಿ ಒಟ್ಟು 42373 ಸದಸ್ಯರಿರುತ್ತಾರೆ (ಸದಸ್ಯರು : 33930, ಸಹ ಸದಸ್ಯರು : 8434 ಮತ್ತು ಸಂಘ–ಸಂಸ್ಥೆಗಳು : 9)

2) **ಅಧಿಕೃತ ಷೇರು ಬಂಡವಾಳ :**

ಬ್ಯಾಂಕಿನ ಅಧಿಕೃತ ಷೇರು ಬಂಡವಾಳವು ಹಾಲಿ ರೂ.15 ಕೋಟಿಗಳಾಗಿರುತ್ತದೆ.

ಎ) ಷೇರು ಬಂಡವಾಳ :

ದಿನಾಂಕ : 31.03.2019ರ ಅಂತ್ಯಕ್ಕೆ ಸಂದಾಯವಾಗಿರುವ ಷೇರು ಬಂಡವಾಳ ರೂ. 1117.52 ಲಕ್ಷಗಳು. ವರದಿ ಸಾಲಿನಲ್ಲಿ ರೂ. 258.21 ಲಕ್ಷ ಹೆಚ್ಚಳವಾಗಿರುತ್ತದೆ.

2. ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು :

ಬ್ಯಾಂಕಿನ ಕಾಯ್ದಿಟ್ಟ ನಿಧಿ ಮತ್ತು ಇತರೆ ನಿಧಿಗಳು ಪ್ರತಿ ವರ್ಷ ಹೆಚ್ಚುತ್ತಾ ಬಂದಿದ್ದು. ದಿನಾಂಕ : 31.03.2019ರ ಅಂತ್ಯಕ್ಕೆ ಇದರ ಒಟ್ಟು ಮೊತ್ತ ರೂ. 2,817.06 ಲಕ್ಷಗಳಾಗಿದ್ದು, ಇದಕ್ಕೆ 2018–19ನೇ ಸಾಲಿನ ಲಾಭಾಂಶ ಸೇರಿದರೆ ಒಟ್ಟು ಮೊತ್ತ ರೂ. 3007.05 ಲಕ್ಷಗಳಾಗುತ್ತದೆ. ಇದು ದುಡಿಯುವ ಬಂಡವಾಳದ ಶೇ. 6.21 ರಷ್ಟು ಸ್ವಂತ ನಿಧಿಗಳಿರುವುದು ಬ್ಯಾಂಕಿನ ಸದೃಡತೆಗೆ ಸಾಕ್ಷಿ. ವಿವರ ಕೆಳಕಂಡಂತೆ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ವಿವರ	31.03.2015	31.03.2016	31.03.2017	31.03.2018	31.03.2019
1	ಕಾಯ್ದಿಟ್ಟ ನಿಧಿ	671.57	720.24	775.57	837.05	895.83
2	ಕಟ್ಟಡ ನಿಧಿ	349.18	362.04	382.77	403.22	421.95
3	ಕರಡು ಮತ್ತು ಸಂಶಯಾತ್ಮಕ ನಿಧಿ	976.80	976.80	976.80	970.62	948.63
4	ಸದಸ್ಯರ ಕ್ಷೇಮ ನಿಧಿ	24.06	23.98	23.84	23.62	21.37
5	ಸದಸ್ಯರ ಮರಣ ಪರಿಹಾರ ನಿಧಿ	38.73	35.48	33.84	37.37	36.50
6	ಲಾಭಾಂಶ ಸಮತೋಲನ ನಿಧಿ	23.04	23.04	23.04	23.04	23.04
7	ಹೂಡಿಕೆಗಳ ಏರಿಳಿತ ನಿಧಿ	144.34	146.05	152.27	25.10	166.70
8	ಹೂಡಿಕೆಗಳ ಮೇಲೆ ಸವಕಳಿ ನಿಧಿ	317.47	317.47	159.87	295.22	124.07
9	ಸಿಬ್ಬಂದಿ ಕ್ಷೆಮ ನಿಧಿ	3.85	3.85	3.85	3.85	3.84
10	ಧರ್ಮೋದ್ದೇಶ ನಿಧಿ	1.97	1.97	1.97	1.97	1.97
11	ಮಹೋತ್ಸವ ನಿಧಿ	13.78	13.78	13.78	26.05	26.05

12	ಉತ್ಪಾದಕ ಆಸ್ತಿಗಳ ನಿಧಿ	73.46	80.00	81.00	98.00	120.25
13	ಇತರೆ ನಿಧಿಗಳು	17.26	22.38	24.75	25.83	26.86
	ಒಟ್ಟು ಮೊತ್ತ	**2655.51**	**2727.08**	**2653.35**	**2770.94**	**2817.06**

3. ದುಡಿಯುವ ಬಂಡವಾಳ :

ಬ್ಯಾಂಕಿನ ದುಡಿಯುವ ಬಂಡವಾಳ ದಿನಾಂಕ 31.03.2019ರ ಅಂತ್ಯಕ್ಕೆ ರೂ.48452.80 ಲಕ್ಷಗಳಾಗಿರುತ್ತದೆ. ಹಿಂದಿನ ಸಾಲಿಗೆ ಹೋಲಿಸಿದಾಗ ವರ್ಷಾಂತ್ಯಕ್ಕೆ ರೂ.989.88 ಲಕ್ಷಗಳು (ಶೇ.2.09) ಹೆಚ್ಚಳವಾಗಿರುತ್ತದೆ.

4. ಹೂಡಿಕೆಗಳು :

ಹೂಡಿಕೆಗಳ ಮಟ್ಟ ದಿನಾಂಕ 31.03.2019ರ ಅಂತ್ಯಕ್ಕೆ ರೂ.14910.61 ಲಕ್ಷಗಳಾಗಿರುತ್ತದೆ. ವರದಿ ಸಾಲಿನಲ್ಲಿ ರೂ.4831.66 ಲಕ್ಷಗಳು (ಶೇ.24.47) ಕಡಿಮೆಯಾಗಿರುತ್ತದೆ.

5. ಠೇವಣಿಗಳು :

ಬ್ಯಾಂಕಿನ ಒಟ್ಟು ಠೇವಣಿಗಳು ದಿನಾಂಕ 31.03.2019ರ ಅಂತ್ಯಕ್ಕೆ ರೂ.43659.49 ಲಕ್ಷಗಳಾಗಿರುತ್ತದೆ. ವರದಿ ಸಾಲಿನಲ್ಲಿ ರೂ.563.51 ಲಕ್ಷಗಳು (ಶೇ.1.31) ಹೆಚ್ಚಳವಾಗಿರುತ್ತದೆ.

ಠೇವಣಿ ಮೇಲೆ ಹಿರಿಯ ನಾಗರೀಕರುಗಳಿಗೆ ಶೇ.0.5ರಷ್ಟು ಹೆಚ್ಚಿನ ಬಡ್ಡಿ ನೀಡಲಾಗುತ್ತಿದೆ. ಸದಸ್ಯರುಗಳು ತಮ್ಮ ಉಳಿತಾಯ ಹಣವನ್ನು ಠೇವಣಿಯಲ್ಲಿ ತೊಡಗಿಸಿ ಬ್ಯಾಂಕಿನ ಪ್ರಗತಿಗೆ ಸಹಾಯಕರಾಗಬೇಕೆಂದು ಕೋರಿದೆ.

6. 1) ಸಾಲಗಳು ಮತ್ತು ಮುಂಗಡಗಳು :

ದಿನಾಂಕ 31.03.2019ರ ಅಂತ್ಯಕ್ಕೆ ಬ್ಯಾಂಕಿನ ಒಟ್ಟು ಸಾಲ ಮತ್ತು ಮುಂಗಡಗಳು ರೂ.30959 ಲಕ್ಷಗಳಾಗಿರುತ್ತದೆ. ವರದಿ ಸಾಲಿನಲ್ಲಿ ರೂ.5919.86 (ಶೇ.23.64) ಹೆಚ್ಚಳವಾಗಿದೆ. ಬ್ಯಾಂಕು ಸಾಧಿಸಿರುವ ಹೆಚ್ಚಿನ ಠೇವಣಿ ಸಂಗ್ರಹಣೆ ಪ್ರಗತಿಯಿಂದಾಗಿ ಸದಸ್ಯರುಗಳಿಗೆ ಎಲ್ಲಾ ತರಹದ ಸಾಲ ಸೌಲಭ್ಯಗಳನ್ನು ತ್ವರಿತವಾಗಿ ಒದಗಿಸಲು ಸಾಧ್ಯವಾಗಿದೆ. ಠೇವಣಿ ಮತ್ತು ಸಾಲಗಳ ಅನುಪಾತ (CD Ratio) ವರ್ಷಾಂತ್ಯಕ್ಕೆ ಶೇ.70.91 ಇದ್ದು, ಸದಸ್ಯರುಗಳು ಅರ್ಜಿ ಸಲ್ಲಿಸಿದ ಕೇವಲ ಒಂದು ವಾರದೊಳಗೆ ಆಧಾರದ ಸಾಲಗಳು ಮತ್ತು ಆಧಾರವಿಲ್ಲದ ಸಾಲಗಳನ್ನು, ಒಂದು ತಿಂಗಳೊಳಗಾಗಿ ಅಡಮಾನ ಸಾಲಗಳನ್ನು ಮಂಜೂರು ಮಾಡಿಕೊಂಡಿಲಾಗುತ್ತಿದೆ. ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದ ಮೇರೆಗೆ ಆರ್ಥಿಕವಾಗಿ ಹಿಂದುಳಿದ ಜನಾಂಗಕ್ಕೆ, ಆರ್ಥಿಕ ದುರ್ಬಲರಿಗೆ ಸಾಲ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಸದಸ್ಯರಿಗೆ ತ್ವರಿತಗತಿಯಲ್ಲಿ ಸಾಲ ಸೌಲಭ್ಯಗಳನ್ನು ಒದಗಿಸುತ್ತಿದ್ದು ಇದರ ಉಪಯೋಗವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.

2) ನಿರ್ದೇಶಕರ ಸಾಲಗಳು :

ನಿರ್ದೇಶಕರ ಹಾಗೂ ಅವರ ಸಂಬಂಧಿಗಳಿಗೆ ಯಾವುದೇ ತರಹದ ಸಾಲಗಳನ್ನು ನೀಡಿರುವುದಿಲ್ಲ.

ಹಾಲಿ ವಿವಿಧ ಸಾಲಗಳ ಗರಿಷ್ಠ ಮಿತಿ ಮತ್ತು ಬಡ್ಡಿ ದರ ಕೆಳಕಂಡಂತಿರುತ್ತದೆ.

ಕ್ರ ಸಂ.	ಸಾಲದ ವಿಧಗಳು	ಸಾಲದ ಮೊತ್ತ	ಬಡ್ಡಿ ದರ
1	ಆಧಾರವಿಲ್ಲದ ಸಾಲಗಳು	ಗರಿಷ್ಠ ರೂ. 2 ಲಕ್ಷಗಳು	ಶೇ. 13
2	ಆಭರಣ ಸಾಲ	ಗರಿಷ್ಠ ರೂ. 10 ಲಕ್ಷಗಳು ಕನಿಷ್ಠ ರೂ. 10,000/- ರೂ. 2 ಲಕ್ಷಗಳವರೆಗೆ ರೂ. 2 ಲಕ್ಷ ಮೇಲ್ಪಟ್ಟು ರೂ. 10 ಲಕ್ಷಗಳವರೆಗೆ	ಶೇ. 11 ಶೇ. 12
3	ವಾಹನ ಸಾಲ	ಗರಿಷ್ಠ ರೂ. 40 ಲಕ್ಷಗಳು	ಶೇ. 10
4	ಓವರ್‌ಡ್ರಾಫ್ಟ್ – ಸ್ವತ್ತಿನ ಮೇಲೆ	ಗರಿಷ್ಠ ರೂ. 2 ಕೋಟಿ	ಶೇ. 13.5
5	ಓವರ್‌ಡ್ರಾಫ್ಟ್ – ಠೇವಣಿಗಳ ಮೇಲೆ	ಠೇವಣಿ ಮೊತ್ತದ ಮೇಲೆ ಶೇ. 90 ರಷ್ಟು	ಠೇವಣಿ ಬಡ್ಡಿ ದರದ ಮೇಲೆ ಶೇ.2 ರಷ್ಟು ಹೆಚ್ಚಿಗೆ
6	1) ವ್ಯಾಪಾರ ಅಭಿವೃದ್ಧಿ ಸಾಲಗಳು 2) ವಾಣಿಜ್ಯ ಸಂಕೀರ್ಣ ಕಟ್ಟಲು (for group borrowers)	ಗರಿಷ್ಠ ರೂ. 3 ಕೋಟಿಗಳು ಗರಿಷ್ಠ ರೂ. 5 ಕೋಟಿಗಳು	ಶೇ. 12.5
7	ಮನೆ ಕಟ್ಟಲು ಮತ್ತು ಮನೆ ಕೊಳ್ಳಲು	ಗರಿಷ್ಠ ರೂ. 70 ಲಕ್ಷಗಳು	ಶೇ. 10.5
8	ನಿವೇಶನ ಕೊಳ್ಳಲು ಜೊತೆಗೆ ಮನೆ ಕಟ್ಟಲು (ಒಟ್ಟು)	ಗರಿಷ್ಠ ರೂ. 70 ಲಕ್ಷಗಳು	ಶೇ. 10.5
9	ನಿವೇಶನ ಕೊಳ್ಳಲು	ಗರಿಷ್ಠ ರೂ. 40 ಲಕ್ಷಗಳು	ಶೇ. 12.5
10	ಸಾಲ ತೀರಿಸಲು	ಗರಿಷ್ಠ ರೂ. 70 ಲಕ್ಷಗಳು	ಶೇ. 13.5
11	ಮದುವೆ ಉದ್ದೇಶಕ್ಕೆ	ಗರಿಷ್ಠ ರೂ. 25 ಲಕ್ಷಗಳು	ಶೇ. 12.5
12	ರಿಪೇರಿ ಮತ್ತು ನವೀಕರಣಕ್ಕೆ	ಗರಿಷ್ಠ ರೂ. 5 ಲಕ್ಷಗಳು	ಶೇ. 12.5
13	ವಿದ್ಯಾಭ್ಯಾಸಕ್ಕಾಗಿ	ಗರಿಷ್ಠ ರೂ. 15 ಲಕ್ಷಗಳು ರೂ. 5 ಲಕ್ಷಗಳವರೆಗೆ ರೂ. 5 ಲಕ್ಷ ಮೇಲ್ಪಟ್ಟು ಮತ್ತು ರೂ. 15 ಲಕ್ಷಗಳವರೆಗೆ	ಶೇ. 10 ಶೇ. 11.5
14	ಸ್ವತ್ತಿನ ಮೇಲೆ ಬಾಡಿಗೆ ರಿಯಾಯಿತಿ ಸಾಲಗಳು	ಗರಿಷ್ಠ ರೂ. 3 ಕೋಟಿಗಳವರೆಗೆ	ಶೇ. 11

ಈ ಎಲ್ಲಾ ಸಾಲಗಳ ಮಂಜೂರಾತಿಗಾಗಿ ಸ್ವತ್ತಿನ ಮೌಲ್ಯ, ಅರ್ಜಿದಾರರ ನಿವ್ವಳ ಆದಾಯ, ಮರುಪಾವತಿ ಶಕ್ತಿ ಹಾಗೂ ಇನ್‌ಕಂಟ್ಯಾಕ್ಸ್ ಅಸೆಸ್‌ಮೆಂಟ್ ಆರ್ಡರ್ ಇವುಗಳನ್ನು ಗಣನೆಗೆ ತೆಗೆದುಕೊಂಡು ಅರ್ಹತೆ ಆಧಾರದ ಮೇಲೆ ಸಾಲ ಮಂಜೂರು ಮಾಡಲಾಗುತ್ತಿದೆ. ಸದಸ್ಯರುಗಳು ಈ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಸಾಲ ಪಡೆದು, ಸಾಲಗಳನ್ನು ಸಕಾಲಕ್ಕೆ ಮರುಪಾವತಿ ಮಾಡಬೇಕೆಂದು ಕೋರಿದೆ.

ಜಯನಗರ, ಮತ್ತೀಕೆರೆ, ವಿಜಯನಗರ, ಕೆಂಗೇರಿ, ಯಲಹಂಕ ಮತ್ತು ಬೇಗೂರು ಶಾಖೆಗಳಲ್ಲಿ ಚಿನ್ನಾಭರಣ ಮೇಲಿನ ಸಾಲಗಳನ್ನು ನೀಡಲಾಗುತ್ತಿದೆ.

7. ಸುಸ್ತಿ ಸಾಲ ಹಾಗೂ ಅನುತ್ಪಾಧಕ ಆಸ್ತಿಗಳು :–

ಅ) ಸುಸ್ತಿಯಾದ ಸಾಲಗಳ ಕಾಲಾವಧಿ ವಿಂಗಡಣೆಯ ತುಲನಾತ್ಮಕ ವಿವರ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ವಿವರ	ಸುಸ್ತಿಯಾದ ಸಾಲದ ಮೊತ್ತ				
	31.03.2015	31.03.2016	31.03.2017	31.03.2018	31.03.2019
ಒಂದು ವರ್ಷದ ಒಳಗೆ	160.38	159.04	156.33	126.73	895.19
1 ವರ್ಷಕ್ಕೆ ಮೇಲ್ಪಟ್ಟು 2 ವರ್ಷದವರೆಗೆ	36.00	40.42	38.46	16.64	4.97
2 ವರ್ಷಕ್ಕೆ ಮೇಲ್ಪಟ್ಟು 3 ವರ್ಷದವರೆಗೆ	17.50	22.00	70.90	37.20	18.19
3 ವರ್ಷಕ್ಕೆ ಮೇಲ್ಪಟ್ಟು	85.34	74.14	72.44	131.73	109.74
ಒಟ್ಟು	**299.22**	**295.60**	**338.13**	**312.30**	**1028.09**

ದಿನಾಂಕ : 31.03.2019ಕ್ಕೆ ರೂ.1028.09 ಲಕ್ಷಗಳ ಸುಸ್ತಿ ಮೊತ್ತ ಬಾಕಿ ಇದ್ದು, ಇದನ್ನು ಇನ್ನೂ ಕಡಿಮೆ ಮಾಡಲು ತೀವ್ರವಾದ ವಸೂಲಾತಿ ಕ್ರಮಕೈಗೊಳ್ಳಲಾಗಿದೆ.

ಆ) ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಗಳಿಗನುಸಾರವಾಗಿ ಅನುತ್ಪಾದಕ ಆಸ್ತಿಗಳ ವಿವರ ಕೆಳಕಂಡಂತಿವೆ.

ವರ್ಷ	ಒಟ್ಟು ಅನುತ್ಪಾದಕ ಆಸ್ತಿ (Gross NPA)		ನಿವ್ವಳ ಅನುತ್ಪಾದಕ ಆಸ್ತಿ (Net NPA)	
	ಮೊತ್ತ	ಶೇ.	ಮೊತ್ತ	ಶೇ.
31.03.2011	341.68	4.27	(-) 607.14	0
31.03.2012	340.12	3.61	(-) 612.29	0
31.03.2013	309.92	2.73	(-) 642.49	0

31.03.2014	360.88	2.29	(-) 591.53	0
31.03.2015	853.78	4.44	(-) 123.02	0
31.03.2016	896.76	4.29	(-) 80.04	0
31.03.2017	1348.89	6.44	372.09	1.86
31.03.2018	1023.48	4.09	52.86	0.22
31.03.2019	1530.69	4.94	582.06	1.94

ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣ ನಿವ್ವಳ ಸಾಲಗಳ ಮೇಲೆ ಶೇ.1.94 ಮತ್ತು ಒಟ್ಟು ಅನುತ್ಪಾದಕ ಆಸ್ತಿ ಸಾಲಗಳ ಮೇಲೆ ಶೇ.4.94ರಷ್ಟು ಇರುತ್ತದೆ. ಇದನ್ನು ಇನ್ನೂ ಕಡಿಮೆ ಮಾಡಲು ಅಗತ್ಯ ವಸೂಲಾತಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಸೂಚಿಸಿರುವ ಗರಿಷ್ಠ ನಿವ್ವಳ ಎನ್. .ಎ. ಪ್ರಮಾಣವು ಶೇ.10 ಇರಬಹುದಾದರೂ, ಬ್ಯಾಂಕಿನ ನಿವ್ವಳ ಅನುತ್ಪಾದಕ ಮಟ್ಟ ಶೇ.1.94 ಆಗಿರುತ್ತದೆ. ಆದರೂ ಒಟ್ಟು ಅನುತ್ಪಾದಕ ಆಸ್ತಿಯನ್ನು ಇನ್ನೂ ಕಡಿಮೆ ಮಾಡಲು ಸಾಲ ಪಡೆದ ಸದಸ್ಯರ ಸಹಕಾರ ಅತ್ಯಗತ್ಯ. ಆದ್ದರಿಂದ ಸಾಲದ ಕಂತುಗಳನ್ನು ನಿಯಮಿತವಾಗಿ ಸಂದಾಯ ಮಾಡಬೇಕೆಂದು ವಿನಂತಿಸುತ್ತೇವೆ.

ದಿನಾಂಕ : 31.03.2019ರ ಅಂತ್ಯಕ್ಕೆ ಬ್ಯಾಂಕಿನ ಮುಂಗಡಗಳು ರೂ.30959 ಲಕ್ಷಗಳಿಗೆ ತಲು ರುತ್ತದೆ. ಸಾಲಗಳ ಮರುಪಾವತಿಯಲ್ಲಿ ಅಸಲನ್ನು ಅಥವಾ ಬಡ್ಡಿಯನ್ನು 3 ಕಂತುಗಳಿಗಿಂತ ಹೆಚ್ಚಿಗೆ ಮರುಪಾವತಿ ಮಾಡದೆ ಇರುವಂತಹ ಸಾಲಗಳನ್ನು ನಾನ ಪರ್ಫಾರ್ಮಿಂಗ್ ಅಸೆಟ್ಸ್ (ಎನ್. .ಎ.) ಆಗಿ ವಿಂಗಡಣೆ ಮಾಡಬೇಕೆಂದು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನ ನೀಡಿದ್ದು, ಇಂತಹ ಸಾಲಗಳು ಎನ್. .ಎ. ಆಗಿ ವರ್ಗೀಕರಣಗೊಳ್ಳುತ್ತದೆ. ಇದರಿಂದಾಗಿ ಬ್ಯಾಂಕಿನ ಲಾಭದ ಮೇಲೆ ಪರಿಣಾಮ ಬೀರಲಿದೆ. ಆದುದರಿಂದ ಸುಸ್ತಿ ಇಲ್ಲದೆ ಸಾಲದ ಕಂತುಗಳನ್ನು ಅಸಲು ಮತ್ತು ಬಡ್ಡಿ ಸಮೇತ ಮರುಪಾವತಿಸಬೇಕೆಂದು ಸಾಲಗಾರರಲ್ಲಿ ಮತ್ತೊಮ್ಮೆ ವಿನಂತಿಸಿದೆ.

ದಿನಾಂಕ 31.03.2019ರ ಅಂತ್ಯಕ್ಕೆ ಎನ್. .ಎ.ಗೆ ಕಾಯ್ದಿರಿಸಿರುವ ಒಟ್ಟು ಮೊತ್ತ ರೂ.948.63 ಲಕ್ಷಗಳಾಗಿರುತ್ತದೆ. ಅನುತ್ಪಾದಕ ಆಸ್ತಿಯಾಗಿ ವರ್ಗೀಕರಣಗೊಂಡ ಸಾಲಗಳ ಪೂರ್ತಿ ಮೊತ್ತವನ್ನು ಲಾಭದಿಂದ ಕಾಯ್ದಿರಿಸಬೇಕಾಗಿರುವುದರಿಂದ ಲಾಭ ಕಡಿಮೆಯಾಗುವುದಲ್ಲದೆ, ಡಿವಿಡೆಂಡ್ ನೀಡಲು ಸಹ ಸಾಧ್ಯವಾಗುವುದಿಲ್ಲ. ಆದುದರಿಂದ ಸುಸ್ತಿ ಇಲ್ಲದೆ ಸಾಲದ ಕಂತುಗಳನ್ನು ಅಸಲು ಮತ್ತು ಬಡ್ಡಿ ಸಮೇತ ಮರುಪಾವತಿಸಬೇಕೆಂದು ಸಾಲಗಾರರಲ್ಲಿ ವಿನಂತಿಸಿದೆ.

ಸಾಲಗಾರರು ಸಾಲದ ಕಂತುಗಳನ್ನು ಕ್ರಮಬದ್ಧವಾಗಿ ಪಾವತಿಸುವುದರಿಂದ ಸುಸ್ತಿ ಬಡ್ಡಿ ಮತ್ತು ಇತರೆ ಖರ್ಚುಗಳನ್ನು ಸಾಲಗಾರರಿಂದ ವಸೂಲಾತಿ ಮಾಡುವುದು ತಪ್ಪುತ್ತದೆ ಮತ್ತು ಸಾಲಗಳ ವಸೂಲಿಗಾಗಿ ಹೂಡುವ ಕೇಸುಗಳಿಗೆ ತಗಲುವ ವೆಚ್ಚಗಳನ್ನು ಸಹ ತ್ಪಸಬಹುದು. ಮಾನ್ಯ ಸದಸ್ಯರುಗಳು ಪಡೆದಿರುವ ಸಾಲಗಳನ್ನು ಸಮರ್ಪಕವಾಗಿ ಸುಸ್ತಿ ಇಲ್ಲದೆ, ವೇಳೆಗೆ ಸರಿಯಾಗಿ

ಮರುಪಾವತಿಸಿ ಸಹಕರಿಸಬೇಕೆಂದು ಮತ್ತೊಮ್ಮೆ ಕೋರಲಾಗಿದೆ. ಇದರಿಂದ ಬ್ಯಾಂಕು ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುತ್ತದೆ.

ಆಡಳಿತ ಮಂಡಳಿಯು ಸಾಲಗಾರರು ಸಾಲವನ್ನು ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಸಾಲಗಾರರು ಸಾಲದ ಕಂತುಗಳನ್ನು ಬಡ್ಡಿ ಸಹಿತ ನಿಗದಿತ ಅವಧಿಯೊಳಗೆ ಪಾವತಿ ಮಾಡಿದಲ್ಲಿ ಪಾವತಿಸಿದ ಬಡ್ಡಿಯಲ್ಲಿ ಶೇ.1 ರಂತೆ ಬಡ್ಡಿ ರಿಯಾಯಿತಿ ನೀಡಲಾಗುತ್ತಿದೆ. ಬಡ್ಡಿ ರಿಯಾಯತಿಯನ್ನು ಆಯಾ ವರ್ಷ ಪೂರ್ಣಗೊಂಡ ತಕ್ಷಣ ಅರ್ಜಿ ಸಲ್ಲಿಸಿ ಈ ರಿಯಾಯಿತಿಯನ್ನು ಪಡೆಯುವುದು.

ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅನುತ್ಪಾದಕ ಆಸ್ತಿ (ಎನ್. .ಎ.) ನೀತಿಯ ಬಗ್ಗೆ ಅನೇಕ ಸುತ್ತೋಲೆಗಳು ಬಂದಿದ್ದು. ಈ ಸುತ್ತೋಲೆಗಳ ನಿರ್ದೇಶನಗಳನ್ನು ಜಾರಿಗೊಳಿಸುವುದಕೋಸ್ಕರ ಸಾಲ ವಸೂಲಾತಿ ನಿಯಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿದೆ. ಸುಸ್ತಿ ಸಾಲಗಳ ವಸೂಲಾತಿಗಾಗಿ ಕೇಸುಗಳನ್ನು ಫೈಲು ಮಾಡಿ, ಜ್ತ ಮತ್ತು ಸ್ವತ್ತನ್ನು ಹರಾಜಿಗೆ ಒಳಪಡಿಸಿ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗಿದೆ. ಹಾಗೂ ಆಗಿಂದಾಗ್ಗೆ ಸುಸ್ತಿದಾರರ ಮನೆಗಳಿಗೆ ಮತ್ತು ಕಛೇರಿಗಳಿಗೆ ಭೇಟಿ ನೀಡಿ ಸುಸ್ತಿ ಸಾಲಗಳನ್ನು ನಿರ್ದಾಕ್ಷಣ್ಯವಾಗಿ ವಸೂಲಿ ಮಾಡಲಾಗುತ್ತಿದೆ. ಆದ್ದರಿಂದ ಸಾಲ ಪಡೆದ ಸದಸ್ಯರಲ್ಲಿ ಕಳಕಳಿಯ ಮನವಿಯೇನೆಂದರೆ ದಯವಿಟ್ಟು ಯಾವ ಕಾರಣಕ್ಕೂ ಸುಸ್ತಿದಾರರಾಗಬೇಡಿ. ಒಂದು ವೇಳೆ ಸುಸ್ತಿದಾರರಾದಲ್ಲಿ ಅಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಎಲ್ಲಾ ಕಾನೂನಿನ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು. ಸದಸ್ಯರುಗಳು ಪಡೆದಂತಹ ಸಾಲಗಳ ಕಂತುಗಳನ್ನು ಕ್ರಮಬದ್ಧವಾಗಿ ಮರುಪಾವತಿಸಿ ಬ್ಯಾಂಕಿನ ಬೆಳವಣಿಗೆಗೆ ಸಹಕರಿಸಬೇಕಾಗಿ ಕೋರಿದೆ.

ಸ್ಥಿರಾಸ್ತಿ ಮೇಲಿನ ಸುಸ್ತಿ ಸಾಲಗಳ ವಸೂಲಾತಿ ಬಗ್ಗೆ ಕೇಂದ್ರ ಸರ್ಕಾರ (SARFAESIA) ಸರ್ಫೇಸಿಯಾ ಕಾಯ್ದೆಯನ್ನು ಕಾಯಿದೆ 54ರ ಪ್ರಕಾರ ದಿನಾಂಕ 28.01.2003 ರಿಂದ ಸಹಕಾರ ಬ್ಯಾಂಕುಗಳಿಗೆ ಅನ್ವಯಿಸುವಂತೆ ಜಾರಿಗೊಳಿಸಿದೆ. ರಿಸರ್ವ್ ಬ್ಯಾಂಕ್ ನಿರ್ದೇಶನದಂತೆ ಮೇಲ್ಕಂಡ ಕಾಯಿದೆ ಸೆಕ್ಷನ್ 13(2)ರ ಅಡಿಯಲ್ಲಿ ಸುಸ್ತಿ ಸಾಲಗಾರರಿಗೆ ನೋಟೀಸ್ ಜಾರಿ ಮಾಡಿ 60 ದಿನಗಳೊಳಗಾಗಿ ಪೂರ್ತಿ ಸಾಲ/ಬಡ್ಡಿ ಇನ್ನಿತರ ಖರ್ಚು–ವೆಚ್ಚಗಳನ್ನು ಪಾವತಿಸಲು ತಪ್ಪಿದ್ದಲ್ಲಿ ಕಾಯಿದೆ ಸೆಕ್ಷನ್ 13(4)ರ ಪ್ರಕಾರ ಸಾಲಕ್ಕೆ ನೀಡಿದ ಸ್ಥಿರಾಸ್ತಿ / ಯಂತ್ರೋಪಕರಣಗಳನ್ನು ಬ್ಯಾಂಕಿನ ವಶಕ್ಕೆ ತೆಗೆದುಕೊಂಡು 30 ದಿನಗಳ ನೋಟೀಸ್ ಜಾರಿ ಮಾಡಿ ಮಾರಾಟ ಮಾಡಲು ಅಧಿಕೃತ ಅಧಿಕಾರಿಯನ್ನು (Authorised Officer) ನೇಮಿಸಲಾಗಿದೆ. ಈ ಕಾಯಿದೆಯನ್ವಯ ಸುಸ್ತಿದಾರರಿಗೆ ಈಗಾಗಲೇ ನೋಟೀಸ್ ಜಾರಿ ಮಾಡಿ ಸ್ಥಿರಾಸ್ತಿಗಳ ಬಹಿರಂಗ ಹರಾಜಿಗೆ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಲು ಕ್ರಮಕೈಗೊಂಡಿದೆ.

ಈ ಕಾಯಿದೆಯನ್ವಯ ವಸೂಲಾತಿ ಕ್ರಮಗಳು ಕಠಿಣ ಪರಿಸ್ಥಿತಿ ತಂದೊಡ್ಡುವುದಲ್ಲದೆ ದಿನ

ಪತ್ರಿಕೆಗಳಲ್ಲಿ ನೀಡುವ ಜಾಹಿರಾತು ವೆಚ್ಚ, ಇನ್ನಿತರ ವೆಚ್ಚಗಳನ್ನು ಸಾಲಗಾರರೇ ಭರಿಸಬೇಕಾಗಿರುವುದರಿಂದ ಸಾಲಗಾರರು ತಮ್ಮ ಸಾಲದ ಕಂತುಗಳನ್ನು ಸಕಾಲದಲ್ಲಿ ಮರುಪಾವತಿ ಮಾಡಬೇಕೆಂದು ಕೋರಲಾಗಿದೆ.

8. ಲಾಭದ ಹಂಚಿಕೆ :

ಬ್ಯಾಂಕು 2018–19ನೇ ಸಾಲಿನಲ್ಲಿ ಒಟ್ಟು ಲಾಭ ರೂ.639 ಲಕ್ಷ ಗಳಿಸಿದ್ದು. ಆದಾಯ ತೆರಿಗೆ ಪೂರ್ವ ನಿವ್ವಳ ಲಾಭ ರೂ.528 ಲಕ್ಷಗಳು ಮತ್ತು ಆದಾಯ ತೆರಿಗೆ ಪಾವತಿ ನಂತರ ರೂ.331 ಲಕ್ಷ ಲಾಭ ಗಳಿಸಿದೆಯೆಂದು ತಿಳಿಸಲು ಹರ್ಷಿಸುತ್ತೇವೆ. ಈ ವರ್ಷ ಶೇ.14 ರಷ್ಟು ಡಿವಿಡೆಂಡ್ ನೀಡಲು ಆಡಳಿತ ಮಂಡಳಿ ವಾರ್ಷಿಕ ಮಹಾಸಭೆಗೆ ಶಿಫಾರಸ್ಸು ಮಾಡಿದೆ.

ಬ್ಯಾಂಕು 2018–19ನೇ ಸಾಲಿನಲ್ಲಿ ಗಳಿಸಿರುವ ನಿವ್ವಳ ಲಾಭ ರೂ. 3,30,82,424.23 ಗಳನ್ನು ಕೆಳಕಂಡಂತೆ ಹಂಚಿಕೆ ಮಾಡಲಾಗಿದೆ ಮತ್ತು ಇದಕ್ಕೆ ಮಹಾಸಭೆಯ ಅನುಮೋಧನೆಯನ್ನು ಕೋರಲಾಗಿದೆ.

(ರೂ.ಗಳಲ್ಲಿ)

ಕ್ರ. ಸಂ.	ಬಾಬ್ತುಗಳು		ಲಾಭದ ಹಂಚಿಕೆ
1	ಕಾಯ್ದಿಟ್ಟ ನಿಧಿ	ಶೇ.25	82,70,606.00
2	ಸಹಕಾರ ಶಿಕ್ಷಣ ನಿಧಿ	ಶೇ.2	4,96,236.00
3	ಸಹಕಾರ ಶಿಕ್ಷಣ ನಿಧಿ, ಸಹಕಾರ ಬ್ಯಾಂಕುಗಳ ಮಹಾಮಂಡಳಕ್ಕೆ	ಶೇ.1	2,48,118.00
4	ಕಟ್ಟಡ ನಿಧಿ	ಶೇ.15	36,10,120.00
5	ಸದಸ್ಯರ ಕ್ಷೇಮಾಭಿವೃದ್ಧಿ ನಿಧಿ	ಶೇ.5	12,03,373.00
6	ಹೂಡಿಕೆಗಳ ಏರಿಳಿತ ನಿಧಿ	ಶೇ.5	12,03,373.00
7	ಸದಸ್ಯರ ಮರಣೋತ್ತರ ನಿಧಿ	ಶೇ.5	12,03,373.00
8	ಮಹೋತ್ಸವ ನಿಧಿ	ಶೇ.10	24,06,746.00
9	ಕರಡು ಮತ್ತು ಅನುಮಾನಾಸ್ಪದ ಸಾಲದ ನಿಧಿ	ಶೇ.4	9,62,699.00
10	ಲಾಭಾಂಶ / ಡಿವಿಡೆಂಡ್	ಶೇ.14	1,33,39,220.00
11	ಉಳಿಕೆ ಮೊತ್ತ ಕಾಯ್ದಿಟ್ಟ ನಿಧಿಗೆ		1,38,560.23
	ಒಟ್ಟು		**ರೂ. 3,30,82,424.23**

9. ವರಮಾನ ತೆರಿಗೆ :–

2006ನೇ ವರ್ಷದ ಕೇಂದ್ರ ಸರ್ಕಾರದ ಮುಂಗಡ ಪತ್ರದಲ್ಲಿ ಸಹಕಾರ ಬ್ಯಾಂಕುಗಳ ನಿವ್ವಳ ಲಾಭದ ಮೇಲೆ ಆದಾಯ ತೆರಿಗೆ ಕಾಯ್ದೆ1961 ಕಲಂ 80 ರದ್ದಾಗಿ, ಪಟ್ಟಣ ಸಹಕಾರ ಬ್ಯಾಂಕುಗಳು 2006-07ನೇ ಸಾಲಿನಿಂದ ಆದಾಯ ತೆರಿಗೆಯನ್ನು ಪಾವತಿಸಬೇಕಾಗಿದೆ. ಆದಾಯ ತೆರಿಗೆ ಕಾಯ್ದೆ

1961 ರನ್ವಯ ಪಟ್ಟಣ ಸಹಕಾರ ಬ್ಯಾಂಕುಗಳು ಪ್ರತಿ ವರ್ಷ ತಮ್ಮ ನಿವ್ವಳ ಲಾಭದ ಮೇಲೆ ಶೇ.30ರಷ್ಟು ಆದಾಯ ತೆರಿಗೆಯನ್ನು, ಇದರ ಮೇಲೆ ಶೇ.12 ಸರ್‌ಚಾರ್ಜ್‌ನ್ನು ಮತ್ತು ಶೇ. 4ರಷ್ಟು ಶಿಕ್ಷಣ ಉಪಕರವನ್ನು ಆದಾಯ ತೆರಿಗೆ ಇಲಾಖೆಗೆ ಪಾವತಿ ಮಾಡಬೇಕಾಗಿದ್ದು, ಅದರಲ್ಲೂ ಮುಂದಿನ ವರ್ಷದ ಲಾಭವನ್ನು ಅಂದಾಜು ಮಾಡಿ ಅದರ ಮೇಲಿನ ತೆರಿಗೆಯ ಮೊದಲನೆ ಕಂತನ್ನು ಪ್ರಸಕ್ತ ಸಾಲಿನ ಜೂನ್ 15ರ ಒಳಗೆ, 2ನೇ ಕಂತನ್ನು ಸೆಪ್ಟೆಂಬರ್ 15ರೊಳಗೆ, 3ನೇ ಕಂತನ್ನು ಡಿಸೆಂಬರ್ 15ರೊಳಗೆ, 4ನೇ ಕಂತನ್ನು ಮಾರ್ಚ್ 15ರೊಳಗೆ ಮುಂಗಡವಾಗಿ ಪಾವತಿಸಬೇಕಾಗಿರುತ್ತದೆ. 2018–19ನೇ ಸಾಲಿನಲ್ಲಿ ಬ್ಯಾಂಕು ರೂ.197.31 ಲಕ್ಷ ಆದಾಯ ತೆರಿಗೆಯನ್ನು ಪಾವತಿಸಿದೆ.

10. ಶಾಖೆಗಳ ಪ್ರಗತಿ : –

ವರದಿ ಸಾಲಿನಲ್ಲಿ ಎಲ್ಲಾ ಶಾಖೆಗಳು ಉತ್ತಮವಾಗಿ ಕಾರ್ಯನಿರ್ವಹಿಸಿವೆ. ದಿನಾಂಕ 31.03.2019ಕ್ಕೆ ಬ್ಯಾಂಕಿನ ಶಾಖಾವಾರು ಠೇವಣಿ ಮತ್ತು ಸಾಲಗಳ ತುಲನಾತ್ಮಕ ವಿವರ ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

ಶಾಖೆಗಳು	31.03.2017		31.03.2018		31.03.2019	
	ಠೇವಣಿಗಳು	ಸಾಲಗಳು	ಠೇವಣಿಗಳು	ಸಾಲಗಳು	ಠೇವಣಿಗಳು	ಸಾಲಗಳು
ಕೇಂದ್ರ ಕಛೇರಿ / ಜಯನಗರ	18172.01	7814.42	19528.81	8516.52	18555.27	9971.01
ಮತ್ತೀಕೆರೆ	6273.64	4596.59	7373.12	6385.01	8154.27	8439.82
ವಿಜಯನಗರ	4290.01	2235.58	4317.05	2373.46	4476.14	3451.73
ಇಂದಿರಾನಗರ	2797.72	1566.97	3260.29	1879.40	3293.44	2271.64
ಕೆಂಗೇರಿ	1582.17	1034.28	1713.76	1471.80	1792.87	1785.23
ಯಲಹಂಕ	4054.09	2953.46	4343.13	3407.51	4602.00	3461.98
ಬಿ.ಇ.ಎಸ್. ಕಾಲೇಜು	2241.60	755.43	2475.89	928.57	2459.92	1171.25
ಬೇಗೂರು	–	–	83.93	76.87	325.58	406.34
ಒಟ್ಟು	39411.24	20956.73	43095.98	25039.14	43659.49	30959.00

ಬ್ಯಾಂಕಿನ ಕೇಂದ್ರ ಕಛೇರಿ, ಮತ್ತೀಕೆರೆ ಮತ್ತು ಯಲಹಂಕ ಶಾಖೆಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ. ವಿಜಯನಗರ, ಇಂದಿರಾನಗರ, ಕೆಂಗೇರಿ, ಬಿ.ಇ.ಎಸ್. ಕಾಲೇಜು ಮತ್ತು ಬೇಗೂರು ಶಾಖೆಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಈ ಎಲ್ಲಾ ಶಾಖೆಗಳಿಗೆ ಸ್ವಂತ

ಕಟ್ಟಡ ಹೊಂದುವ ಉದ್ದೇಶದಿಂದ ಸೂಕ್ತ ನಿವೇಶನಗಳನ್ನು ಅನ್ವೇಷಣೆ ಮಾಡಲಾಗುತ್ತಿದೆ. ಮಾನ್ಯ ಸದಸ್ಯರು ಸೂಕ್ತ ನಿವೇಶನ ತಮ್ಮ ಗಮನಕ್ಕೆ ಬಂದಲ್ಲಿ ಕಾರ್ಯದರ್ಶಿಯವರಿಗೆ ತಿಳಿಸಬೇಕೆಂದು ಕೋರಿದೆ.

11. ಗಣಕೀಕರಣ:–

ಬ್ಯಾಂಕಿನ ಎಲ್ಲಾ ಶಾಖೆಗಳನ್ನು ಗಣಕೀಕರಣಗೊಳಿಸಲಾಗಿದ್ದು ದೈನಂದಿನ ವ್ಯವಹಾರಗಳನ್ನು ಗಣಕಯಂತ್ರದಲ್ಲಿಯೇ ನಿರ್ವಹಿಸಲಾಗುತ್ತಿದೆ. ಇದರಿಂದ ಸದಸ್ಯರಿಗೆ ಮತ್ತು ಗ್ರಾಹಕರಿಗೆ ತ್ವರಿತ ಮತ್ತು ಉತ್ತಮ ಸೇವೆ ನೀಡಲು ಅನುಕೂಲವಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್‌ನವರ ನಿರ್ದೇಶನದ ಮೇರೆಗೆ ಕೋರ್ ಬ್ಯಾಂಕಿಂಗ್ ತಂತ್ರಜ್ಞಾನವನ್ನು ದಿನಾಂಕ : 01.09.2015ರಿಂದ ಅಳವಡಿಸಿಕೊಂಡಿದ್ದು, ಎಲ್ಲಾ ವಹಿವಾಟುಗಳು ಸುಸೂತ್ರವಾಗಿ ನಡೆಯುತ್ತಿವೆ. ಇದರಿಂದ ಮಾನ್ಯ ಸದಸ್ಯರು/ಗ್ರಾಹಕರುಗಳು ಬ್ಯಾಂಕಿನ ಯಾವುದೇ ಶಾಖೆಯಲ್ಲಿ ವ್ಯವಹರಿಸಬಹುದು. ಅಲ್ಲದೆ ಬ್ಯಾಂಕು NEFT/RTGS ಸೌಲಭ್ಯ ಒದಗಿಸುತ್ತಿದೆ. ATM (Rupay Card) ಡೆಬಿಟ್ ಕಾರ್ಡ್‌ನ್ನು ಸದಸ್ಯರಿಗೆ/ಗ್ರಾಹಕರಿಗೆ ವಿತರಿಸಲಾಗುತ್ತಿದೆ. ಈ ಎಲ್ಲಾ ಸೇವೆ/ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳಲು ಮಾನ್ಯ ಸದಸ್ಯರಲ್ಲಿ ವಿನಂತಿಸಿದೆ.

12. ಲಾಕರ್‌ಗಳು :–

ಬ್ಯಾಂಕಿನ ಪ್ರಧಾನ ಶಾಖೆ – ಜಯನಗರ, ಯಲಹಂಕ ಶಾಖೆ, ವಿಜಯನಗರ ಶಾಖೆ, ಕೆಂಗೇರಿ ಶಾಖೆ, ಮತ್ತೀಕೆರೆ ಶಾಖೆ, ಬಿ.ಇ.ಎಸ್. ಕಾಲೇಜು ಶಾಖೆ ಮತ್ತು ಬೇಗೂರು ಶಾಖೆಗಳಲ್ಲಿ ವಿವಿಧ ಗಾತ್ರದ ಸೇಫ್ ಡೆಪಾಸಿಟ್ ಲಾಕರ್ಸ್ ಸೌಲಭ್ಯ ದೊರೆಯುತ್ತದೆ. ಸದಸ್ಯರುಗಳು ಈ ಸೌಲಭ್ಯ ಉಪಯೋಗಿಸಿಕೊಳ್ಳಲು ಕೋರಲಾಗಿದೆ.

13. ಬ್ಯಾಂಕಿನ ಶಾಸನಬದ್ದ ಲೆಕ್ಕಪರಿಶೋಧನಾ ವ್ಯವಸ್ಥೆ :

2017–18ನೇ ಸಾಲಿನ ಸರ್ವಸದಸ್ಯರ ಸಭೆಯು ಆಯ್ಕೆ ಮಾಡಿದ್ದ ಮೆಸರ್ಸ್ ಎಸ್.ಆರ್.ಆರ್.ಕೆ. ಶರ್ಮಾರವರಿಂದ ಲೆಕ್ಕ ಪರಿಶೋಧನೆಯಾಗಿದ್ದು, ಲೆಕ್ಕಪರಿಶೋಧನೆ ನಂತರ 2018–19ನೇ ಸಾಲಿಗೆ ಬ್ಯಾಂಕನ್ನು 'ಎ' ದರ್ಜೆಗೆ ವರ್ಗೀಕರಿಸಲಾಗಿದೆ.

14. ಪ್ರತ್ಯೇಕ ಆಂತರಿಕ ಲೆಕ್ಕಪರಿಶೋಧನಾ ವಿಭಾಗ :–

ಬ್ಯಾಂಕಿನ ಆಂತರಿಕ ಲೆಕ್ಕಪರಿಶೋಧನಾ ಉಪಸಮಿತಿಯ ಕ್ರಿಯಾಶೀಲತೆಯನ್ನು ಹೆಚ್ಚಿಸಿ, ಬ್ಯಾಂಕಿನಲ್ಲಿ ಇತರೆ ಉಪಸಮಿತಿಗಳ ಜೊತೆಗೆ ಪ್ರತ್ಯೇಕ ಲೆಕ್ಕಪರಿಶೋಧನಾ ವಿಭಾಗವನ್ನು ರಚಿಸಿ, ಭಾರತೀಯ ರಿಸರ್ವ್ ಬ್ಯಾಂಕಿನ ಲೆಕ್ಕಪರಿಶೋಧನಾ ಸಮಿತಿಯ ಕಾರ್ಯ ಚಟುವಟಿಕೆಗಳು, ಭಾರತೀಯ ರಿಸರ್ವ್ ಬ್ಯಾಂಕ್ ಹಾಕಿರುವ ಮಾರ್ಗ ಸೂಚಿಗಳನ್ವಯ ನಿರ್ವಹಿಸುವ ಬಗ್ಗೆ ಕ್ರಮ ತೆಗೆದುಕೊಂಡು ಶಾಖಾ ಪರಿವೀಕ್ಷಣೆ ಮಾಡಿ ವರದಿಯನ್ನು ಕಾರ್ಯಕಾರಿ ಮಂಡಳಿಗೆ ಸಲ್ಲಿಸಲಾಗುತ್ತಿದೆ.

15. ಸಿಬ್ಬಂದಿ :–

ವರದಿ ಸಾಲಿನಲ್ಲಿ ಆಡಳಿತ ಮಂಡಳಿಯು ಸಿಬ್ಬಂದಿ ವರ್ಗಕ್ಕೆ ಅನ್ವಯಿಸುವ ಎಲ್ಲಾ ಭತ್ಯೆಗಳನ್ನು ನೀಡುತ್ತಿದೆ. ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ಶಿಫಾರಸ್ಸು ಮಾಡಿರುವ 7ನೇ ವೇತನ ಆಯೋಗದ ವರದಿ ಅನ್ವಯ ಬ್ಯಾಂಕಿನ ಸಿಬ್ಬಂದಿಗಳಿಗೆ ವೇತನ ಶ್ರೇಣಿಗಳನ್ನು ನೀಡಿ ಇದನ್ನು ಅನುಷ್ಠಾನಗೊಳಿಸಿದೆ. ಸಿಬ್ಬಂದಿ ವರ್ಗಕ್ಕೆ ಕಡಿಮೆ ಬಡ್ಡಿದರದಲ್ಲಿ ಮನೆ ಸಾಲದ ಗರಿಷ್ಠ ಮಿತಿಯನ್ನು ರೂ.50 ಲಕ್ಷಗಳವರೆಗೆ, ಸಿಬ್ಬಂದಿ ಸಾಲವನ್ನು ರೂ.5 ಲಕ್ಷಗಳವರೆಗೂ ಮತ್ತು ವಾಹನ ಸಾಲದ ಗರಿಷ್ಠಮಿತಿಯನ್ನು ರೂ.5 ಲಕ್ಷಗಳವರೆಗೆ ಸಾಲ ಸೌಲಭ್ಯ ಕಲ್ಪಿಸಲಾಗಿದೆ. ಎಲ್ಲಾ ಸಿಬ್ಬಂದಿ ಮತ್ತು ಕುಟುಂಬ ವರ್ಗದವರಿಗೆ ವೈದ್ಯಕೀಯ ವಿಮಾ ಸೌಲಭ್ಯ ಗರಿಷ್ಠ ಮಿತಿ ರೂ.1,00,000/– ಗಳವರೆಗೆ ಕಲ್ಪಿಸಲಾಗಿದೆ.

16. 2019-20ನೇ ಸಾಲಿನ ಕಾರ್ಯಕ್ರಮದ ಪರಿಗಣನೆ :–

2019-20ನೇ ಸಾಲಿನಲ್ಲಿ ಈ ಕೆಳಕಂಡವುಗಳನ್ನು ಅನುಷ್ಠಾನಕ್ಕೆ ತರಲು ಕಾರ್ಯಯೋಜನೆ ರೂ ಸಲಾಗಿದೆ.

1) ಇನ್ನೂ ಹೆಚ್ಚಿನ ಠೇವಣಿಗಳನ್ನು ಸಂಗ್ರಹಿಸಿ ಹೆಚ್ಚಿನ ಸಾಲಗಳನ್ನು ನೀಡುವುದು.

2) ಒಟ್ಟು ವಹಿವಾಟು (Total Business) ಅನ್ನು ಕನಿಷ್ಠ ಶೇ.25ರಷ್ಟು ಪ್ರಗತಿ ಸಾಧಿಸುವುದು.

3) ಒಟ್ಟು ಎನ್. .ಎ ಪ್ರಮಾಣವನ್ನು ಶೇ.3ಕ್ಕಿಂತ ಕಡಿಮೆಗೆ ತರುವುದು.

4) ಮೊಬೈಲ್ ಬ್ಯಾಂಕಿಂಗ್ ಸೇವೆಯನ್ನು ಅನುಷ್ಠಾನಕ್ಕೆ ತರುವುದು.

5) ಸದಸ್ಯರು/ಗ್ರಾಹಕರು, ಅಂತರ್ಜಾಲ (Internet) ಮೂಲಕ ಬಿಲ್‌ಗಳು ಮತ್ತು ಇತರೆ ಖರ್ಚುಗಳನ್ನು ಪಾವತಿಸಲು ಅನುಷ್ಠಾನಗೊಳಿಸುವುದು.

ಕೃತಜ್ಞತೆಗಳು :

ಬ್ಯಾಂಕಿನ ಸರ್ವತೋಮುಖ ಬೆಳವಣಿಗೆಗೆ ಅಮೂಲ್ಯವಾದ ಸಲಹೆ ಹಾಗೂ ಮಾರ್ಗದರ್ಶನ ನೀಡುತ್ತಿರುವ ಭಾರತೀಯ ರಿಸರ್ವ್ ಬ್ಯಾಂಕ್, ಸಹಕಾರ ಇಲಾಖೆ ಹಾಗೂ ಆಡಿಟ್ ಇಲಾಖೆ, ಶಾಸನಬದ್ಧ ಲೆಕ್ಕಪರಿಶೋಧಕರಾದ ಮೆಸರ್ಸ್ ಎಸ್.ಆರ್.ಆರ್.ಕೆ. ಶರ್ಮಾ ಅಸೋಸಿಯೇಟ್ಸ್, ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ, ಅಪೆಕ್ಸ್ ಬ್ಯಾಂಕ್, ಸಂಘ–ಸಂಸ್ಥೆಗಳು, ಎಲ್ಲಾ ಠೇವಣಿದಾರರು, ಗ್ರಾಹಕರು, ಸದಸ್ಯರು ಮತ್ತು ಬ್ಯಾಂಕಿನ ಪುರೋಭಿವೃದ್ಧಿಗೆ ಎಲ್ಲಾ ರೀತಿಯಲ್ಲಿ ಮಾರ್ಗದರ್ಶನ ನೀಡುತ್ತಿರುವ ಬ್ಯಾಂಕಿನ ಸಂಸ್ಥಾಪಕರು ಮತ್ತು ಮಾಜಿ ವಿಶೇಷ ಜಿಲ್ಲಾಧಿಕಾರಿಗಳಾದ ಶ್ರೀ ಬಿ.ಎಲ್. ಲಕ್ಕೇಗೌಡರವರು ಮತ್ತು ನಿವ್ವಳ ಎನ್. .ಎ. ಕಡಿಮೆ ಮಾಡುವಲ್ಲಿ ಹೆಚ್ಚಿನ ಪರಿಶ್ರಮ ವಹಿಸಿ ಮಾರ್ಗದರ್ಶನ ನೀಡಿದ ಬ್ಯಾಂಕಿನ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು ಹಾಗೂ ಬ್ಯಾಂಕಿನ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಕೂಡ ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ

ಸ್ಥಳ : ಬೆಂಗಳೂರು

ದಿನಾಂಕ : 22.08.2019

ಅಮೃತ ಡಿ. ಎ.

ಕಾರ್ಯದರ್ಶಿ

2018-19ನೇ ಸಾಲಿನಲ್ಲಿ ಆಗಿರುವ ಖರ್ಚಿನ ವಿವರ, 2019-20 ನೇ ಸಾಲಿನ ಅನುಮೋದಿತ ಬಡ್ಜೆಟ್ ಮತ್ತು 2020-21ನೇ ಸಾಲಿನ ಅಂದಾಜು ಬಡ್ಜೆಟ್ ವಿವರಗಳು

(ಮೊತ್ತ ರೂ.ಗಳಲ್ಲಿ)

ಕ್ರ.ಸ.	ಲೆಕ್ಕದ ಶೀರ್ಷಿಕೆ	2018–19ನೇ ಸಾಲಿನ ಅನುಮೋದಿತ ಬಡ್ಜೆಟ್	2018–19ನೇ ಸಾಲಿನಲ್ಲಿ ಆದ ವಾಸ್ತವಿಕ ಖರ್ಚು	2018–19ನೇ ಸಾಲಿನಲ್ಲಿ ಹೆಚ್ಚಿಗೆ ಖರ್ಚಾದದ್ದು	2019–20ನೇ ಸಾಲಿನ ಅನುಮೋದಿತ ಬಡ್ಜೆಟ್	2020–21ನೇ ಸಾಲಿನ ಅಂದಾಜು ಬಡ್ಜೆಟ್
1	ಠೇವಣಿಗಳ ಮೇಲಿನ ಬಡ್ಡಿ	340000000	297681713.50		370000000	380000000
2	ಸಿಬ್ಬಂದಿ ವೇತನ ಮತ್ತು ಭತ್ಯೆ ಹಾಗೂ ಸಿಬ್ಬಂದಿ ಭವಿಷ್ಯ ನಿಧಿ	90000000	87774841.00		95000000	100000000
3	ಅ) ಅಂಚೆ	200000	68139.00		200000	200000
	ಆ) ದೂರವಾಣಿ	700000	212986.98		500000	500000
4	ಅ) ಮುದ್ರಣ ಮತ್ತು ಲೇಖನ ಸಾಮಗ್ರಿ	500000	631228.36	131228.36	800000	900000
	ಆ) ಕಂಪ್ಯೂಟರ್ ಸ್ಟೇಷನರಿ	200000	117147.00		200000	300000
5	ಸಾದಿಲ್ವಾರು ಮತ್ತು ಮೀಟಿಂಗ್ ಖರ್ಚು	500000	358338.00		550000	550000
6	ನೀರು ಮತ್ತು ವಿದ್ಯುಚಕ್ತಿ	1200000	935117.80		1200000	1300000
7	ತೆರಿಗೆ ಮತ್ತು ವಿಮೆ	5500000	4884163.00		6500000	7000000
8	ಜಾಹೀರಾತು	200000	214334.30	14334.30	300000	300000
9	ಕಾನೂನು ಮತ್ತು ತಾಂತ್ರಿಕ ವೆಚ್ಚ	400000	646261.32	246261.32	500000	600000
10	ೀತೋಪಕರಣಗಳ ದುರಸ್ತಿ	100000	29345.00		100000	100000
11	ಕಟ್ಟಡ ದುರಸ್ತಿ	1500000	134357.70		1500000	1500000
12	ಮಹಾಸಭೆಯ ಖರ್ಚು	1200000	817200.88		1500000	1500000
13	ಸಿಬ್ಬಂದಿ ಪ್ರಯಾಣ ಭತ್ಯೆ	300000	123551.00		300000	300000
14	ಧರ್ಮೋದ್ದೇಶಗಳ ವಂತಿಗೆ	100000	-		100000	100000
15	ದಿನಪತ್ರಿಕೆ ಮತ್ತು ವಾರ ಪತ್ರಿಕೆ	50000	22035.00		50000	50000
16	ಭಾರತೀಯ ನಿತ್ಯ ನಿಧಿ ಸಂಗ್ರಹಣಾ ವೆಚ್ಚ	1000000	653242.00		1000000	1000000

17	ನಿರ್ದೇಶಕರ ಉಪಾಸಿತ ಮತ್ತು ಪ್ರಯಾಣ ಭತ್ಯೆ	2000000	1683339.00		2500000	2500000
18	ಕಟ್ಟಡ ಬಾಡಿಗೆ	2000000	2722262.00	722262.00	3000000	3500000
19	ಸಿಬ್ಬಂದಿ ತರಭೇತಿ ವೆಚ್ಚ	200000	8457.00		200000	200000
20	ಕಂಪ್ಯೂಟರ್ ಮೈಂಟೆನನ್ಸ್‌ಗಾಗಿ	1000000	799366.22		1000000	1500000
21	ಬ್ಯಾಂಕಿನ ವಾಹನಗಳ ಮೈಂಟೆನನ್ಸ್‌ಗಾಗಿ	200000	62868.51		200000	200000
22	ಯು. .ಎಸ್. ಮತ್ತು ಬ್ಯಾಟರೀಸ್‌ಗಾಗಿ	200000	162800.00		300000	300000
23	ಜನ್ರೇಟರ್ ಮೈಂಟೆನನ್ಸ್‌ಗಾಗಿ	300000	55119.00		200000	200000
24	ಸೆಕ್ಯೂರಿಟಿ ಗಾರ್ಡ್ ವೇತನ	2500000	2004717.00		3000000	3000000
25	M I C R ಕ್ಲಿಯರಿಂಗ್ ಚಾರ್ಜಸ್	400000	206994.01		400000	400000
26	ಹೊಸ ಕಟ್ಟಡದ /ಕಂಪ್ಯೂಟರ್ ಉದ್ಘಾಟನೆ	500000	-		500000	500000
27	ದಾವೆ / ಅಮಲ್ದಾರಿ ಖರ್ಚು	600000	371347.00		600000	700000
28	ಆಡಿಟ್ ವೆಚ್ಚ	400000	150000.00		400000	300000
29	ಪಟ್ಟಣ ಬ್ಯಾಂಕುಗಳ ವಂತಿಗೆ	200000	111900.00		200000	200000
30	AMC ಚಾರ್ಜಸ್	300000	244093.00		300000	400000
31	CBS ಇಂಟರ್‌ನೆಟ್ ಚಾರ್ಜಸ್	400000	247523.83		500000	500000
32	ಠೇವಣಿ ಸಂಗ್ರಹಣಾ ವೆಚ್ಚ	50000	-		50000	50000
33	ATM/IMPS ಅಳವಡಿಕೆಗಾಗಿ ಖರ್ಚು	1000000	221489.50		1000000	1000000
34	ಇತರೆ ಖರ್ಚುಗಳು	500000	1604202.20	1104202.20	800000	1000000
35	ಸಹಕಾರ ಸಪ್ತಾಹ	500000	-		100000	300000
36	ಕೊಡಗು ರಿಲೀಫ್ ಫಂಡ್	-	148220.00		-	-
37	ರಾಜ್ಯ ಸರ್ಕಾರಿ ಸೇವಾ ತೆರಿಗೆ	-	718472.36		-	1200000
38	ಕೇಂದ್ರ ಸರ್ಕಾರಿ ಸೇವಾ ತೆರಿಗೆ	-	687658.77		-	900000
39	ಸಂಯೋಜಿತ ಸೇವಾ ತೆರಿಗೆ	-	441756.40		-	300000
	ಒಟ್ಟು	**456900000**	**407956587.64**	**2218288.18**	**495550000**	**515350000**

2018-19ನೇ ಸಾಲಿನಲ್ಲಿ ಅನುಮೋದಿತ ಬಡ್ಜೆಟ್‌ಗಿಂತ ಹೆಚ್ಚಿಗೆ ಖರ್ಚಾಗಿರುವುದಕ್ಕೆ ವಿವರಣೆ/ಕಾರಣ:–

ಕ್ರ.ಸ.	ಲೆಕ್ಕದ ಶೀರ್ಷಿಕೆ	2018-19ನೇ ಸಾಲಿನ ಅನುಮೋದಿತ ಬಡ್ಜೆಟ್	2018-19ನೇ ಸಾಲಿನ ಆದ ವಾಸ್ತವಿಕ ಖರ್ಚು	ಹೆಚ್ಚಿಗೆ ಖರ್ಚಾದದ್ದು	ಹೆಚ್ಚಿಗೆ ಖರ್ಚಾಗಿರುವುದಕ್ಕೆ ವಿವರಣೆ / ಕಾರಣ
4	ಅ) ಮುದ್ರಣ ಮತ್ತು ಲೇಖನ ಸಾಮಗ್ರಿ	500000.00	631228.36	131228.36	ಉಳಿತಾಯ ಮತ್ತು ಚಾಲ್ತಿ ಖಾತೆ ಗ್ರಾಹಕರಿಗೆ ಅವರ ಹೆಸರಿನಲ್ಲಿ ಹೊಸ ಚೆಕ್ ಪುಸ್ತಕ ಮುದ್ರಿಸಿದ್ದರಿಂದ ಈ ಬಾಬ್ತಿನಲ್ಲಿ ಹೆಚ್ಚಿಗೆ ಖರ್ಚಾಗಿರುತ್ತದೆ.
8	ಜಾಹೀರಾತು	200000.00	214334.30	14334.30	ಕಾರ್ಯದರ್ಶಿಯವರ ನೇಮಕಾತಿ ಬಗ್ಗೆ ದಿನಪತ್ರಿಕೆಗಳಲ್ಲಿ ಜಾಹೀರಾತು ನೀಡಿದ್ದರಿಂದ ಈ ಬಾಬ್ತಿನಲ್ಲಿ ಹೆಚ್ಚಿಗೆ ಖರ್ಚಾಗಿರುತ್ತದೆ.
9	ಕಾನೂನು ಮತ್ತು ತಾಂತ್ರಿಕ ವೆಚ್ಚ	400000.00	646261.32	246261.32	2009–10ನೇ ಸಾಲಿನ ಆದಾಯ ತೆರಿಗೆ ಇಲಾಖೆಯಿಂದ ಬ್ಯಾಂಕಿಗೆ ಬರಬೇಕಾದ ಮೊತ್ತಕ್ಕೆ ಕಾನೂನು ಕ್ರಮಕೈಗೊಂಡಿದ್ದರಿಂದ ಈ ಬಾಬ್ತಿನಲ್ಲಿ ಹೆಚ್ಚಿಗೆ ಖರ್ಚಾಗಿರುತ್ತದೆ.
18	ಕಟ್ಟಡ ಬಾಡಿಗೆ	2000000.00	2722262.00	722262.00	ಶಾಖೆಗಳ ಬಾಡಿಗೆಯನ್ನು ಬಾಡಿಗೆ ಕರಾರು ಪತ್ರದ ಪ್ರಕಾರ ವಾರ್ಷಿಕ ಶೇ.5 ರಷ್ಟು ಹೆಚ್ಚಿಗೆ ಮಾಡಿದ್ದರಿಂದ ಈ ಬಾಬ್ತಿನಲ್ಲಿ ಹೆಚ್ಚಿಗೆ ಖರ್ಚಾಗಿರುತ್ತದೆ.
34	ಇತರೆ ಖರ್ಚುಗಳು	500000.00	1604202.20	1104202.20	ಬಿ.ಇ.ಎಸ್. ಕಾಲೇಜು ಶಾಖೆಯ ಒಳಾಂಗಣವನ್ನು ನವೀಕರಣಗೊಳಿಸಿದ್ದರಿಂದ ಈ ಬಾಬ್ತಿನಲ್ಲಿ ಹೆಚ್ಚಿಗೆ ಖರ್ಚಾಗಿರುತ್ತದೆ.
	ಒಟ್ಟು	**3600000.00**	**5818288.18**	**2218288.18**	

2018-19ನೇ ಸಾಲಿನಲ್ಲಿ ಕ್ಯಾ ಟಲ್ ಬಡ್ಜೆಟ್‌ನಲ್ಲಿ ಆಗಿರುವ ಖರ್ಚಿನ ವಿವರ, 2019-20ನೇ ಸಾಲಿನ ಅನುಮೋದಿತ ಬಡ್ಜೆಟ್ ಮತ್ತು 2020-21ನೇ ಸಾಲಿನ ಅಂದಾಜು ಬಡ್ಜೆಟ್

ಕ್ರ.ಸ.	ಲೆಕ್ಕದ ಶೀರ್ಷಿಕೆ	2018-19ನೇ ಸಾಲಿನ ಅನುಮೋದಿತ ಆದಾಯ	2018-19ನೇ ಸಾಲಿನಲ್ಲಿ ಆದ ವಾಸ್ತವಿಕ ಆದಾಯ	2019-20ನೇ ಸಾಲಿನ ಅನುಮೋದಿತ ಆದಾಯ	2020-21ನೇ ಸಾಲಿನ ಅಂದಾಜು ಆದಾಯ
1	ಸಾಲಗಳ ಮೇಲಿನ ಬಡ್ಡಿ	360000000	338839033.10	380000000	400000000
2	ಸಂಚಯಗಳ ಮೇಲಿನ ಬಡ್ಡಿ	130000000	119193450.16	150000000	150000000
3	ಇತರೆ ಜಮಾ	10000000	13866453.97	20000000	20000000
	ಒಟ್ಟು	500000000	471898937.23	550000000	570000000

2018-19ನೇ ಸಾಲಿನಲ್ಲಿ ಕ್ಯಾ ಟಲ್ ಬಡ್ಜೆಟ್‌ನಲ್ಲಿ ಆಗಿರುವ ಖರ್ಚಿನ ವಿವರ, 2019-20ನೇ ಸಾಲಿನ ಅನುಮೋದಿತ ಬಡ್ಜೆಟ್ ಮತ್ತು 2020-21ನೇ ಸಾಲಿನ ಅಂದಾಜು ಬಡ್ಜೆಟ್

ಕ್ರ.ಸ.	ಲೆಕ್ಕದ ಶೀರ್ಷಿಕೆ	2018-19ನೇ ಸಾಲಿನ ಅನುಮೋದಿತ ಖರ್ಚು	2018-19ನೇ ಸಾಲಿನಲ್ಲಿ ಆದ ವಾಸ್ತವಿಕ ಖರ್ಚು	2019-20ನೇ ಸಾಲಿನ ಅನುಮೋದಿತ ಖರ್ಚು	2020-21ನೇ ಸಾಲಿನ ಅಂದಾಜು ಖರ್ಚು
1	ಪೀಠೋಪಕರಣಗಳು ಮತ್ತು ಕಛೇರಿ ಉಪಕರಣಗಳು	3000000	2029276	3000000	5000000
2	ಗಣಕೀಕರಣಕ್ಕಾಗಿ, ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್	5000000	-	5000000	5000000
3	ಶಾಖೆಗಳಿಗೆ ನಿವೇಶನ ಖರೀದಿಸಲು	30000000	-	30000000	40000000
	ಒಟ್ಟು	38000000	2029276	38000000	50000000

ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಜಯನಗರ, ಬೆಂಗಳೂರು – 560 011

ಬ್ಯಾಂಕಿನ 10 ವರ್ಷಗಳ ಹಣಕಾಸು ವಿವರ

(ರೂ.ಲಕ್ಷಗಳಲ್ಲಿ)

ಆರ್ಥಿಕ ವರ್ಷ	ಸದಸ್ಯರ ಸಂಖ್ಯೆ	ಷೇರು ಬಂಡವಾಳ	ಕಾಯ್ದಿಟ್ಟ ಮತ್ತು ಇತರೆ ನಿಧಿಗಳು	ಠೇವಣಿಗಳು	ಸಾಲ ಮತ್ತು ಮುಂಗಡಗಳು	ಹೂಡಿಕೆಗಳು	ದುಡಿಯುವ ಬಂಡವಾಳ	ಸುಸ್ತಿ ಶೇಕಡ	ನಿವ್ವಳ ಲಾಭ	ಲಾಭಾಂಶ ಶೇಕಡ	ಆಡಿಟ್ ವರ್ಗೀಕರಣ
1	2	3	4	5	6	7	8	9	10	11	12
2009-10	40418	515.39	2278.88	15878.92	7443.84	10829.72	19071.51	ಶೇ.4.80	121.71	ಶೇ.14	'A'
2010-11	40315	541.19	2331.63	15018.72	8003.93	9547.61	18344.86	ಶೇ.3.90	162.98	ಶೇ.16	'A'
2011-12	41060	545.35	2429.29	16739.49	9425.63	10024.82	20288.03	ಶೇ.2.91	213.13	ಶೇ.18	'A'
2012-13	41151	513.32	2557.97	18463.88	11344.87	9799.56	22126.23	ಶೇ.2.73	200.96	ಶೇ.20	'A'
2013-14	41440	477.78	2634.54	20723.63	15751.16	7830.77	24612.71	ಶೇ.1.53	178.46	ಶೇ.16	'A'
2014-15	41644	450.32	2655.51	28591.21	19213.72	11396.10	32230.00	ಶೇ.1.56	117.90	ಶೇ.15	'A'
2015-16	41775	532.05	2727.08	33123.73	20892.04	14277.10	37017.93	ಶೇ.1.42	142.43	ಶೇ.16	'A'
2016-17	41808	642.28	2653.35	39411.24	20956.73	18822.95	43306.20	ಶೇ.1.61	187.39	ಶೇ.15	'A'
2017-18	41869	859.31	2770.94	43095.98	25039.14	19742.27	47462.92	ಶೇ.1.25	171.72	ಶೇ.14	'A'
2018-19	42373	1117.52	2817.06	43659.49	30959.00	14910.61	48452.80	ಶೇ.3.32	330.82	ಶೇ.14	'A'

ದಿ ಭಾರತ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಜಯನಗರ, ಬೆಂಗಳೂರು - 560 011

ಬೈಲಾ ತಿದ್ದುಪಡಿಗಳು

ಬೈಲಾ ಸಂಖ್ಯೆ	ಹಾಲಿ ಇರುವ ಬೈಲಾ	ಬೈಲಾ ಸಂಖ್ಯೆ	ತಿದ್ದುಪಡಿ ಬೈಲಾ	ಷರಾ
20	**ಸದಸ್ಯರು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳು :**	20	**ಸದಸ್ಯರು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳು :**	ಬ್ಯಾಂಕಿನ ಎಲ್ಲಾ ಸದಸ್ಯರುಗಳು ಮತದಾನದ ಹಕ್ಕನ್ನು ಪಡೆಯಲು ಅನುಕೂಲ ವಾಗಲು
20.1	ಬ್ಯಾಂಕು ಒದಗಿಸುವಂತೆ ಪ್ರತಿ ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳ ಅಥವಾ ಸೌಲಭ್ಯಗಳ ಪ್ರಮಾಣವು ಕೆಳಗಿನಂತಿರತಕ್ಕದ್ದು- 1) ಸದಸ್ಯನು ಹೊಂದಿರತಕ್ಕ ಕನಿಷ್ಠ ಷೇರು ಬಂಡವಾಳವು ಐದುನೂರು ರೂಪಾಯಿಗಳು. 2) ಸದಸ್ಯನು ಹೊಂದಿರತಕ್ಕ ಕನಿಷ್ಠ ಠೇವಣಿಯು ಎರಡು ಸಾವಿರದ ಐದು ನೂರು ರೂಪಾಯಿಗಳು ಅಥವಾ ಸದಸ್ಯನು ಸಾಲ ಪಡೆಯಲು ಅಗತ್ಯವಿದ್ದಲ್ಲಿ ಬ್ಯಾಂಕು ನಿರ್ಧರಿಸಿದ ಮಿತಿಗೆ ಒಳಪಟ್ಟು ಸದಸ್ಯನ ಕೋರಿಕೆಯ ಮೊತ್ತ. 3) ಸದಸ್ಯನು ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಠ ಬ್ಯಾಂಕಿಂಗ್ ವ್ಯವಹಾರಗಳ ಸಂಖ್ಯೆಯು ಇಪ್ಪತು ಇರತಕ್ಕದ್ದು.	20.1	ಬ್ಯಾಂಕು ಒದಗಿಸುವಂತೆ ಪ್ರತಿ ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳ ಅಥವಾ ಸೌಲಭ್ಯಗಳ ಪ್ರಮಾಣವು ಕೆಳಗಿನಂತಿರತಕ್ಕದ್ದು- 1) ಸದಸ್ಯನು ಹೊಂದಿರತಕ್ಕ ಕನಿಷ್ಠ ಷೇರು ಬಂಡವಾಳವು ಐದುನೂರು ರೂಪಾಯಿಗಳು. 2) ಸದಸ್ಯನು ಹೊಂದಿರತಕ್ಕ ಕನಿಷ್ಠ ಠೇವಣಿಯು ಎರಡು ಸಾವಿರದ ಐದು ನೂರು ರೂಪಾಯಿಗಳು ಅಥವಾ ಸದಸ್ಯನು ಸಾಲ ಪಡೆಯಲು ಅಗತ್ಯವಿದ್ದಲ್ಲಿ ಬ್ಯಾಂಕು ನಿರ್ಧರಿಸಿದ ಮಿತಿಗೆ ಒಳಪಟ್ಟು ಸದಸ್ಯನ ಕೋರಿಕೆಯ ಮೊತ್ತ. 3) ಸದಸ್ಯನು ತನ್ನ ಚಾಲ್ತಿ ಖಾತೆ ಅಥವಾ ಉಳಿತಾಯ ಖಾತೆಯಲ್ಲಿ ವರ್ಷದಲ್ಲಿ ನಡೆಸಬೇಕಾದ ಕನಿಷ್ಠ ಬ್ಯಾಂಕಿಂಗ್ ವ್ಯವಹಾರಗಳ ಸಂಖ್ಯೆಯು **ಎರಡು** ಇರತಕ್ಕದ್ದು.	